ದಿ: 01-02-2019 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಶ್ರೀ ಎನ್.ಜಿ.ವಕೀಲರಿಂದ :-

1. ವಾದಿಯರ ಪರವಾಗಿ ಸಾಕ್ಷವನ್ನು ನುಡಿಯಲು ಬಂದಿರುತ್ತೇನೆ. ಆಸ್ತಿ ಬೇಕೆಂದು ಈ ದಾವೆಯನ್ನು ಸಲ್ಲಿಸಿರುತ್ತಾರೆ. ಯಾರ ವಿರುದ್ದ ಈ ದಾವೆಯನ್ನು ಸಲ್ಲಿಸಿರುತ್ತಾರೆ ಅಂದರೆ ಸರಿಯಲ್ಲ. ಹನುಮಂತಪ್ಪನನ್ನು ಬಿಟ್ಟು ಇನ್ಯಾರ ಮೇಲೆ ಈ ದಾವೆಯನ್ನು ಸಲ್ಲಿಸಿರುತ್ತಾರೆ ಅಂತ ನನಗೆ ಗೊತ್ತಿಲ್ಲ. ನಾನು ಹೊಸದುರ್ಗ ಪಟ್ಟಣದ ಟಿ.ಬಿ. ಸರ್ಕಲ್ ಬಳಿ ಚಪ್ಪಲಿ ರಿಪೇರಿ ಮಾಡುವ ಅಂಗಡಿಯನ್ನು ಇಟ್ಟುಕೊಂಡಿರುತ್ತೇನೆ. ನಾನು ಹೊಸದುರ್ಗ ಪಟ್ಟಣದ ಎಸ್.ಎಲ್.ವಿ. ಬಡಾವಣೆಯಲ್ಲಿ ವಾಸವಿರುತ್ತೇನೆ. ಸದರಿ ವಿಳಾಸವನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುತ್ತೇನೆ. ಭೋಗಪ್ಪ, ಹನುಮಪ್ಪ ಮತ್ತು ತಿಮ್ಮಪ್ಪ 3 ಜನ ಅಣ್ಣ ತಮ್ಮಂದಿರು. ಅವರಿಗೆ ಬೇರೆ ಸಹೋದರರು ಇರುವುದಿಲ್ಲ. ಇನ್ನೊಬ್ಬ ತಿಮ್ಮಪ್ಪ ಯಾರು ಎಂದು ನನಗೆ ಗೊತ್ತಿಲ್ಲ. ಸದರಿ ಭೋಗಪ್ಪ, ಹನುಮಪ್ಪ ಮತ್ತು ತಿಮ್ಮಪ್ಪನವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಸದರಿಯವರ ಅಜ್ಜ ಭೋಗಪ್ಪ ಯಾವಾಗ ವಿಭಾಗ ಆಗಿರುತ್ತಾರೆ ಅಂತ ನನಗೆ ಗೊತ್ತಿಲ್ಲ. ನಾನು ಕಳೆದ 20 ವರ್ಷಗಳಿಂದ ಹೊಸದುರ್ಗ ಪಟ್ಟಣದ 9 ನೇ ವಾರ್ಡಿನಲ್ಲಿ ವಾಸವಾಗಿರುತ್ತೇನೆ.

2. ಈ ದಾವಾ ಸ್ವತ್ತುಗಳ ಸಂಖ್ಯೆ ವಿಸ್ತೀರ್ಣ ನನಗೆ ಗೊತ್ತಿಲ್ಲ. ವಾದಿಯರು ಮಾಚೇನಹಳ್ಳಿಯಲ್ಲಿ ವಾಸವಾಗಿರುತ್ತಾರೆ. ವಾದಿಯರಿಗೆ ಯಾವ ಜಮೀನು ಕೊಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ. ಅದೇ ರೀತಿಯಾಗಿ ಪ್ರತಿವಾದಿಯರಿಗೆ ಯಾವ ಯಾವ ಜಮೀನುಗಳು ಬಂದಿರುತ್ತವೆ ಎಂದು ನನಗೆ ಗೊತ್ತಿಲ್ಲ. ಯಾವ ಯಾವ ಜಮೀನುಗಳಲ್ಲಿ ಯಾರು ಯಾರು ಸ್ವಾಧೀನದಲ್ಲಿ ಇರುತ್ತಾರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ ಅಂದರೆ ಸಾಕ್ಷಿಯು ಎಲ್ಲರೂ ಒಟ್ಟಿಗೆ ಇರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳು ಯಾವ ಊರಿನಲ್ಲಿ ಇರುತ್ತವೆ ಎಂದು ನನಗೆ ಗೊತ್ತಿಲ್ಲ. 1953 ರಲ್ಲಿ ಆದ ಪಾಲು ಪಾರಿಕತ್ತಿನ ವಿಚಾರ ನನಗೆ ಗೊತ್ತಿಲ್ಲ. 1974 ರಲ್ಲಿ ಆದ ವಿಲ್ಲಿನ ವಿಚಾರ ನನಗೆ ಗೊತ್ತಿಲ್ಲ. ಆ ವಿಲ್ ನ್ನು ಯಾರು ಯಾರಿಗೆ ಮಾಡಿಕೊಟ್ಟಿರುತ್ತಾರೆ ಅಂತ ನನಗೆ ಗೊತ್ತಿಲ್ಲ. ಭೋಗಪ್ಪನಿಗೆ ಎಷ್ಟು ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ಇತ್ತೀಚೆಗೆ ಯಾರು ಯಾರು ಯಾವ ಯಾವ ಸ್ವತ್ತುಗಳನ್ನು ಖರೀದಿಸಿರುತ್ತಾರೆ ಅಂತ ನನಗೆ ಗೊತ್ತಿಲ್ಲ. ನ್ಯಾಯಾಲಯದಲ್ಲಿ ಹಾಜರಿರುವವರು ತಿಮ್ಮಪ್ಪನ ಮಗನಿರುತ್ತಾನೆ.

3. ಭೋಗಪ್ಪ, ಹನುಮಂತಪ್ಪ, ತಿಮ್ಮಪ್ಪ ಎಲ್ಲಿ ವಾಸ ಮಾಡುತ್ತಿದ್ದಾರೆ ಅಂತ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳ ಅಕ್ಕಪಕ್ಕದಲ್ಲಿ ನನಗೆ ಸೇರಿದ ಜಮೀನು ಇರುವುದಿಲ್ಲ. ಆಗಾಗಿ ವಾದಿ ಮತ್ತು ಪ್ರತಿವಾದಿಯರು ಸ್ವತ್ತುಗಳನ್ನು ಪ್ರತ್ಯೇಕವಾಗಿ ಅನುಭವಿಸುತ್ತಿರುವ ವಿಚಾರ ನನಗೆ ಗೊತ್ತಿಲ್ಲ. ಇತ್ತೀಚೆಗೆ ಅವರುಗಳು ಭಾಗ ಮಾಡಿಕೊಂಡಿರುವ ವಿಚಾರ ನನಗೆ ಗೊತ್ತಿಲ್ಲ. ನನಗೆ ಈ ಕೇಸಿನ

ಬಗ್ಗೆ ಮಾಹಿತಿ ಇಲ್ಲದೇ ಇದ್ದರೂಸಹ ವಾದಿಯರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ